# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.1255/2024**

| | | |
|---|---|---|
| ಸಾಕ್ಷಿದಾರರ ಹೆಸರು | ಡಿ ಸಂತೋಷ್ | ಸಿ.ಡಬ್ಲ್ಯು-4 |
| ತಂದೆಯ ಹೆಸರು | ಡಾಕಪ್ಪ | ಪಿ .ಡಬ್ಲ್ಯೂ-2 |
| ವಯಸ್ಸು | 41 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಟೈಲರಿಂಗ್ | ದಿನಾಂಕಃ |
| ವಾಸಃ | ಶಿವಮೊಗ್ಗ | 25.03.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನನ್ನ ಹೆಸರಿಗೆ ದ್ವಿ ಚಕ್ರ ವಾಹನದ ನೊಂದಣಿ ಸಂಖ್ಯೆ ಕೆಎ-14/ಇಇ-5469 ರ ಹಿರೋ ಹೊಂಡಾ ಬೈಕ್ ಇರುತ್ತದೆ. ದಿನಾಂಕ 11.05.2024 ರಂದು ನನ್ನ ಬೈಕ್ ಕಳ್ಳತನವಾಗಿತ್ತು. ಆ ಸಂಬಂಧ ಶಿವಮೊಗ್ಗದ ದೊಡ್ಡಪೇಟೆ ಪೋಲಿಸ್ ಠಾಣೆಗೆ ದೂರನ್ನು ನೀಡಿದ್ದೇನೆ. ಸಾಗರದ ಅಬಕಾರಿ ಪೋಲಿಸರಿಂದ ನನಗೆ ದಿನಾಂಕ 19.07.2024 ರಂದು ನನಗೆ ನೋಟೀಸ್ ಬಂದಿತ್ತು. ಸದರಿ ನೋಟೀಸ್ ನಲ್ಲಿ ಮೇಲ್ಕಂಡ ನನ್ನ ಮಾಲೀಕತ್ವದ ಬೈಕಿನಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುತ್ತಿದ್ದು, ಆ ವ್ಯಕ್ತಿಯು ಮಾಲು ಸಹಿತ ಸಿಕ್ಕಿದ್ದಾನೆ ಎಂದು ಈ ಕುರಿತು ನನ್ನ ಸಮಜಾಯಿಷಿ ನೀಡುವಂತೆ ಸೂಚಿಸಿದ್ದರು. ಅದರಂತೆ ನಾನು ದಿನಾಂಕ 22.07.2024 ರಂದು ಠಾಣೆಗೆ ಹಾಜರಾಗಿ ನನ್ನ ಹೇಳಿಕೆಯೊಂದಿಗೆ ನನ್ನ ಬೈಕ್ ಕಳುವಾಗಿದ್ದ ಕುರಿತು ನೀಡಿದ್ದ ದೂರು ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪೋಲಿಸರಿಗೆ ನೀಡಿ ಹೋಗಿರುತ್ತೇನೆ. ಆನಂತರ ಸದರಿ ಬೈಕ್ ಅನ್ನು ಶಿವಮೊಗ್ಗದ ದೊಡ್ಡಪೇಟೆ ಪೋಲಿಸ್ ಠಾಣೆಯ ಪ್ರಕರಣದಲ್ಲಿ ನಾನು ನ್ಯಾಯಾಲಯದ ಆದೇಶದಂತೆ ಬಿಡಿಸಿಕೊಂಡಿದ್ದೇನೆ.

**2.** ನೋಟೀಸ್ ಅನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು, ಸಾಕ್ಷಿಯು ನೀಡಿದ ಉತ್ತರವನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿ ಕಂಡ ಬೈಕ್ ಅನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ  ಆರೋಪಿತನ ಪರ ವಕೀಲರಾದ ಶ್ರೀ. ಡಿ.ಎಂ.ಆರ್ ರವರಿಂದಃ–</u>**

**1.** ನನಗೆ ಈ ಪ್ರಕರಣದ ಮಾಹಿತಿಯು ಪೋಲಿಸರಿಂದ ತಿಳಿದಿರುತ್ತದೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.